**ಹೆಚ್ಚುವರಿ  ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 3027/2024**

**ಫಿರ್ಯಾದುದಾರರು** ಅಭ್ಯುದಯ ಮಹಿಳಾ ಪತ್ತಿನ  ಸಹಕಾರಿ ಸಂಘ ನಿಯಮಿತ,
ಭಟ್ಕಳ,  ಪ್ರತಿನಿಧಿಸುವವರು, ಜನರಲ್ ಮ್ಯಾನೇಜರ್
ಶ್ರೀಮತಿ ರಾಜೇಶ್ವರಿ  ಮುರಾರಿ ನಾಯ್ಕ,

**– ವಿರುದ್ಧ –**

**ಆರೋಪಿತರು** ಶ್ರೀಮತಿ ನೂತನ ನಾರಾಯಣ ಶಿರೂರು
ಕೋಂ ನಾಗರಾಜ ಆರ್ . ಹೊನ್ನಾವರ
ವಯಸ್ಸುಃ 35 ವರ್ಷ
ಸಾಃ ಎನ್.ಹೆಚ್–66, ಕೋಟೇಶ್ವರ ರಸ್ತೆ,
ಭಟ್ಕಳ –581320.

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದಿ ಸಂಘದಲ್ಲಿ ಸದಸ್ಯರಾಗಿದ್ದು. ಪಿರ್ಯಾದಿ ಸೊಸೈಟಿಯಿಂದ  ದಿನಾಂಕಃ 26–05–2023  ರಂದು ರೂ.2,00,000/– (ರೂಪಾಯಿ ಎರಡು ಲಕ್ಷ ಮಾತ್ರ) ಹಣವನ್ನು  ವೈಯಕ್ತಿಕ ಸಾಲವಾಗಿ, ಪಡೆದುಕೊಂಡಿದ್ದು, ಸದ್ರಿ ಸಾಲವನ್ನು ವಾರ್ಷಿಕ ಶೇಕಡಾ 13% ಬಡ್ಡಿ ದರದಲ್ಲಿ  ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ಪಿರ್ಯಾಧಿ ಸಂಸ್ಥೆಗೆ  ಸಾಲದ ಕರಾರು, ಡಿಮ್ಯಾಂಡ್ ಪ್ರಾಮಿಸರಿ ನೋಟ್  ಮತ್ತು ಇತರೆ  ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದು, ಸದ್ರಿ ಸಾಲವನ್ನು ಮರುಪಾವತಿ ಮಾಡಲು ವಿಫಲರಾಗಿರುತ್ತೀರಿ. ನಂತರ ಪಿರ್ಯಾದಿ ಸಂಘದವರು ಸದ್ರಿ ಸಾಲವನ್ನು ಮರುಪಾವತಿ ಮಾಡುವಂತೆ ಕೇಳಿಕೊಂಡಾಗ  ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು  ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿವಿಲ್ ಕೋರ್ಟ್ ರಸ್ತೆ, ಕಾರವಾರ ಶಾಖೆಯ  ಚೆಕ್ ನಂಬರ್ 985128 ನ್ನು  ರೂ. 73,444/–(ರೂಪಾಯಿ ಎಪ್ಪತ್ತಮೂರು ಸಾವಿರದ ನಾಲ್ಕು ನೂರ ನಲವತ್ತಾಲ್ಕು ಮಾತ್ರ) ಕ್ಕೆ ದಿನಾಂಕಃ 05–04–2024 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಅವರ ವ್ಯವಹಾರದ ಬ್ಯಾಂಕರ್ ರಾದ ಕೆನರಾ ಡಿಸ್ಟ್ರಿಕ್ಟ್ ಕೋ–ಆಪ್ ಬ್ಯಾಂಕ್, ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ

ಹಾಜರಪಡಿಸಿದಾಗ,"Exceeds arrangements" ಎಂಬ ಹಿಂಬರಹದೊಂದಿಗೆ ದಿನಾಂಕಃ 18-04-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 14-05-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ಆರ್.ಪಿ.ಎ.ಡಿ ಮುಖಾಂತರ ನಿಮಗೆ ಕಳುಹಿಸಿದ್ದು, ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ದಿನಾಂಕಃ 28-05-2024 ರಂದು ಸ್ವೀಕರಿಸಿರುತ್ತೀರಿ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 05-07-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.